**ಕರ್ನಾಟಕ ಸರ್ಕಾರದ ನಡವಳಿಗಳು**

**ವಿಷಯ:** ನಾಲ್ಕನೇ ರಾಜ್ಯ ಹಣಕಾಸು ಆಯೋಗದ ಶಿಫಾರಸ್ಸಿನ ಅನುದಾನವನ್ನು 2019-20ನೇ ಸಾಲಿನಿಂದ ಜಿಲ್ಲಾ ಪಂಚಾಯತಿಗಳಿಗೆ ಹಾಗೂ 2020-21ನೇ ಸಾಲಿನಿಂದ ತಾಲ್ಲೂಕು ಪಂಚಾಯಿತಿಗಳಿಗೆ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣಗಳ ಆಧಾರದ ಮೇಲೆ 80:20 ಅನುಪಾತದಲ್ಲಿ ಮತ್ತು 2019-20ನೇ ಸಾಲಿನಲ್ಲಿ ರೂ.2.00ಕೋಟಿ ಅನುದಾನವನ್ನು ಏಕ ರೂಪವಾಗಿ ತಾಲ್ಲೂಕು ಪಂಚಾಯತಿಗಳಿಗೆ ಹಂಚಿಕೆ ಮಾಡುವ ಬಗ್ಗೆ.

**ಓದಲಾಗಿದೆ:**

ರಾಜ್ಯ ಸಚಿವ ಸಂಪುಟದ ಪ್ರಕರಣ ಸಂಖ್ಯೆ:ಸಿ:404/2019, ದಿನಾಂಕ:11-07-2019.

**ಪ್ರಸ್ತಾವನೆ:**

ನಾಲ್ಕನೇ ರಾಜ್ಯ ಹಣಕಾಸು ಆಯೋಗವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಸ್ಥಳೀಯ ಸಂಸ್ಥೆಗಳ ಅಗತ್ಯತೆಗಳನ್ನು ಗಮನದಲ್ಲಿರಿಸಿಕೊಂಡು ಅನುದಾನವನ್ನು ವರ್ಗಾಯಿಸಲು ಸರಳವಾದ ನಿಯಮ ಮತ್ತು ಸೂತ್ರಗಳನ್ನು ಅನುಸರಿಸುವಂತೆ ಶಿಫಾರಸ್ಸು ಮಾಡಿರುತ್ತದೆ. ಆಯೋಗವು ತನ್ನ ವರದಿಯಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯತಿಗಳಿಗೆ ಅನುದಾನ ಬಿಡುಗಡೆ ಮಾಡಲು ಅನುಸರಿಸಬೇಕಾದ ಕ್ರಮಗಳ ಬಗ್ಗೆ ವಿವರಿಸಿರುತ್ತದೆ. ಈ ಎಲ್ಲಾ ಅಂಶಗಳನ್ನು ಮೇಲೆ ಓದಲಾದ ಸಚಿವ ಸಂಪುಟದ ಸಭೆಯಲ್ಲಿ ಚರ್ಚಿಸಲಾಗಿರುತ್ತದೆ ಹಾಗೂ ಈ ಸಂಬಂಧವಾಗಿ ಸಚಿವ ಸಂಪುಟ ಕೈಗೊಂಡ ನಿರ್ಧಾರಗಳ ಆಧಾರದ ಮೇಲೆ ಈ ಕೆಳಕಂಡಂತೆ ಪರಿಶೀಲಿಸಲಾಗಿರುತ್ತದೆ.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಜಿಲ್ಲಾ ಮತ್ತು ತಾಲ್ಲೂಕು ಪಂಚಾಯಿತಿಗಳಿಗೆ ನಾಲ್ಕನೆಯ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸಿನನ್ವಯ ಈಗ ಬಿಡುಗಡೆ ಮಾಡುತ್ತಿರುವ ಅಭಿವೃದ್ಧಿ ಅನುದಾನವನ್ನು ಇನ್ನು ಮುಂದೆ 'ಅನಿರ್ಬಂಧಿತ ಅನುದಾನ' ಎಂದು ಪರಿಗಣಿಸಬೇಕಾಗಿದೆ. ಈ ರೀತಿಯಾಗಿ ವರ್ಗಾವಣೆ ಮಾಡುವ ಅನುದಾನವನ್ನು 'ರಾಜ್ಯ ಹಣಕಾಸು ಆಯೋಗದ ಅನುದಾನ' ವೆಂದು ಲೆಕ್ಕ ಶೀರ್ಷಿಕೆಯಲ್ಲಿ ಸೇರ್ಪಡೆ ಮಾಡಬೇಕಾಗಿರುತ್ತದೆ. ನಾಲ್ಕನೇ ರಾಜ್ಯ ಹಣಕಾಸು ಆಯೋಗವು ಅನುದಾನವನ್ನು ಜನಸಂಖ್ಯೆಗೆ ಶೇ.90ರಷ್ಟು ಮೊತ್ತವನ್ನು ಮತ್ತು ಭೌಗೋಳಿಕ ವಿಸ್ತೀರ್ಣಕ್ಕೆ ಶೇ.10ರಷ್ಟು ಅನುದಾನದ ಮೊತ್ತವನ್ನು ಬಿಡುಗಡೆ ಮಾಡಲು ಶಿಫಾರಸ್ಸು ಮಾಡಿರುತ್ತದೆ. ಈ ಪ್ರಸ್ತಾವನೆಯನ್ನು ಸರ್ಕಾರವು ವೈಜ್ಞಾನಿಕ ತಳಹದಿಯಲ್ಲಿ ವ್ಯತ್ಯಾಸದ ಗುಣಾಂಕದಡಿ (co-efficient of variation) ಪರಿಶೀಲಿಸಿರುತ್ತದೆ. ಅದರಂತೆ, 2019-20ನೇ ಸಾಲಿನಿಂದ ಜಿಲ್ಲಾ ಪಂಚಾಯತಿಗಳಿಗೆ ಹಾಗೂ 2020-21ನೇ ಸಾಲಿನಿಂದ ತಾಲ್ಲೂಕು ಪಂಚಾಯಿತಿಗಳಿಗೆ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣಗಳ ಆಧಾರದ ಮೇಲೆ 80:20 ಅನುಪಾತದಲ್ಲಿ ಮತ್ತು 2019-20ನೇ ಸಾಲಿನಲ್ಲಿ ರೂ.2.00ಕೋಟಿ ಅನುದಾನವನ್ನು ಏಕ ರೂಪವಾಗಿ ಪ್ರತಿ ತಾಲ್ಲೂಕು ಪಂಚಾಯತಿಗಳಿಗೆ ಹಂಚಿಕೆ ಮಾಡಲು ಸರ್ಕಾರ ತೀರ್ಮಾನಿಸಿರುತ್ತದೆ.

ಈ ಹಿನ್ನೆಲೆಯಲ್ಲಿ ಜಿಲ್ಲಾ ಪಂಚಾಯತಿಗಳಿಗೆ ಕನಿಷ್ಠ ರೂ.4.00ಕೋಟಿಗಳಿಂದ ರೂ.8.00ಕೋಟಿಗಳಂತೆ ಜನಸಂಖ್ಯೆ ಮತ್ತು ಭೌಗೋಳಿಕ ವಿಸ್ತೀರ್ಣಗಳ ಆಧಾರದ ಮೇಲೆ 80:20 ಅನುಪಾತದಲ್ಲಿ ಒಟ್ಟಾರೆ ರೂ.172.07ಕೋಟಿಗಳ ಅನುದಾನವನ್ನು ಪ್ರತಿ ಆರ್ಥಿಕ ಸಾಲಿನಲ್ಲಿ ಬಿಡುಗಡೆ ಮಾಡಲು ಮತ್ತು 2019-20ನೇ ಸಾಲಿನಲ್ಲಿ ತಾಲ್ಲೂಕು ಪಂಚಾಯತಿಗಳಿಗೆ ಏಕ ರೂಪವಾಗಿ ತಲಾ ರೂ.2.00ಕೋಟಿಗಳಂತೆ ಒಟ್ಟಾರೆ ರೂ.354.00ಕೋಟಿಗಳನ್ನು ಹಾಗೂ 2020-21ನೇ ಆರ್ಥಿಕ ಸಾಲಿನಿಂದ ಕನಿಷ್ಠ ರೂ.2.00ಕೋಟಿಗಳಿಂದ ರೂ.3.00ಕೋಟಿಗಳಂತೆ ಒಟ್ಟಾರೆ ರೂ.531.00ಕೋಟಿಗಳ ಅನುದಾನವನ್ನು ಬಿಡುಗಡೆ ಮಾಡಲು ಸರ್ಕಾರ ನಿರ್ಧರಿಸಿದೆ. ಅದರಂತೆ, ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ 206 ಜಿಪಸ 2018, ದಿನಾಂಕ:17-07-2019.**

ಮೇಲಿನ ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಸರ್ಕಾರವು ಈ ಕೆಳಕಂಡಂತೆ ಆದೇಶಿಸಿದೆ.

1. ಜಿಲ್ಲಾ ಮತ್ತು ತಾಲ್ಲೂಕು ಪಂಚಾಯತಿಗಳಿಗೆ ಬಿಡುಗಡೆ ಮಾಡುತ್ತಿರುವ 'ಅಭಿವೃದ್ಧಿ ಅನುದಾನ' ವನ್ನು 4ನೇ ರಾಜ್ಯ ಹಣಕಾಸು ಆಯೋಗವು ಶಿಫಾರಸ್ಸು ಮಾಡಿರುವಂತೆ ಈ ಅನುದಾನಗಳನ್ನು "ರಾಜ್ಯ ಹಣಕಾಸು ಆಯೋಗದ ಅನಿರ್ಬಂಧಿತ ಅನುದಾನ" ಎಂದು ಬದಲಾಯಿಸಿದೆ.

2. 2019-20ನೇ ಆರ್ಥಿಕ ಸಾಲಿನಿಂದ 30 ಜಿಲ್ಲಾ ಪಂಚಾಯತಿಗಳಿಗೆ ಶೇ.80ರಷ್ಟು ಜನಸಂಖ್ಯೆ ಮತ್ತು ಶೇ.20ರಷ್ಟು ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ಕನಿಷ್ಠ ರೂ.4.00 ಕೋಟಿಗಳಿಂದ ಗರಿಷ್ಠ ರೂ.8.00 ಕೋಟಿಗಳಿಗೆ ಆಂತರಿಕವಾಗಿ ಹಂಚಿಕೆ ಮಾಡಲು, ಒಟ್ಟು ರೂ.172.07 ಕೋಟಿಗಳ ಅನುದಾನವನ್ನು ಬಿಡುಗಡೆಗೊಳಿಸಿದೆ.

3. 2019-20ನೇ ಆರ್ಥಿಕ ಸಾಲಿನಿಂದ 177 ತಾಲ್ಲೂಕು ಪಂಚಾಯಿತಿಗಳಿಗೆ ಏಕ ರೂಪವಾಗಿ ಪ್ರತಿ ತಾಲ್ಲೂಕು ಪಂಚಾಯತಿಗೆ ರೂ.2.00ಕೋಟಿಗಳಂತೆ ಒಟ್ಟು ರೂ.354.00ಕೋಟಿಗಳನ್ನು ಹಂಚಿಕೆ ಮಾಡಲಾಗಿದೆ.
4. 2020-21ನೇ ಸಾಲಿನಿಂದ ಕನಿಷ್ಠ ರೂ.2.00ಕೋಟಿಗಳಿಂದ ಗರಿಷ್ಠ ರೂ.3.00 ಕೋಟಿಗಳಿಗೆ ಅನಿರ್ಬಂಧಿತ ಅನುದಾನವನ್ನು ಜನಸಂಖ್ಯೆ ಆಧಾರದ ಮೇಲೆ ಶೇ.80 ರಷ್ಟು ಮತ್ತು ಭೌಗೋಳಿಕ ವಿಸ್ತೀರ್ಣದ ಆಧಾರದ ಮೇಲೆ ಶೇ.20 ರಷ್ಟು ಅನುದಾನವನ್ನು ಹಂಚಿಕೆ ಮಾಡಲು, ಒಟ್ಟು ರೂ.531.00 ಕೋಟಿಗಳನ್ನು ಬಿಡುಗಡೆಗೊಳಿಸಲಾಗುವುದು.

ಈ ಆದೇಶವನ್ನು ಪ್ರಕರಣ ಸಂಖ್ಯೆ:ಸಿ:404/2019, ದಿನಾಂಕ:11-07-2019ರ ರಾಜ್ಯ ಸಚಿವ ಸಂಪುಟದ ಅನುಮೋದನೆಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

**(ಎಸ್.ಎಂ.ಜುಲ್‌ಫಿಖಾರ್‌ಉಲ್ಲಾ)**
ನಿರ್ದೇಶಕರು (ಪಂ.ರಾಜ್-2)(ಪ್ರ)ಹಾಗೂ
ಸರ್ಕಾರದ ಪದನಿಮಿತ್ತ ಜಂಟಿ ಕಾರ್ಯದರ್ಶಿ
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ
17.07.19

**ಗೆ,**

1. ಪ್ರಧಾನ ಮಹಾಲೇಖಪಾಲರು (ಜಿ ಅಂಡ್ ಎಸ್ ಎಸ್ ಎ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು (ಇ ಅಂಡ್ ಆರ್ ಎಸ್ ಎ), ಕರ್ನಾಟಕ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು (ಎ ಅಂಡ್ ಇ), ಕರ್ನಾಟಕ, ಬೆಂಗಳೂರು.
4. ರಾಜ್ಯದ ಎಲ್ಲಾ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ಜಿಲ್ಲಾ ಪಂಚಾಯತಿಗಳು.
5. ನಿರ್ದೇಶಕರು, ಇ-ಗವರನೆನ್ಸ್ ಶಾಖೆ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
6. ಆಂತರಿಕ ಆರ್ಥಿಕ ಸಲಹೆಗಾರರು, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.
7. ರಾಜ್ಯದ ಎಲ್ಲಾ ಕಾರ್ಯನಿರ್ವಾಹಕ ಅಧಿಕಾರಿಗಳು, ಎಲ್ಲಾ ತಾಲ್ಲೂಕು ಪಂಚಾಯತಿಗಳು.
8. ಇಲಾಖಾ ವೆಬ್‌ಸೈಟ್ / ಕರ್ನಾಟಕ ವಿಕಾಸ ಮಾಸ ಪತ್ರಿಕೆ.
9. ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿ.

**ಪ್ರತಿಯನ್ನು ಮಾಹಿತಿಗಾಗಿ:**

1. ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತಿ ರಾಜ್ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3. ಸರ್ಕಾರದ ಪ್ರಧಾನ ಕಾರ್ಯದರ್ಶಿ(ಪಂ.ರಾಜ್), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
4. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಆರ್ಥಿಕ ಇಲಾಖೆ ಇವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
5. ನಿರ್ದೇಶಕರು(ಪಂ.ರಾಜ್-2), ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ ಇವರ ಆಪ್ತ ಸಹಾಯಕ, ಬಹುಮಹಡಿಗಳ ಕಟ್ಟಡ, ಬೆಂಗಳೂರು.

ಅನುಬಂಧ-1

## ಜಿಲ್ಲಾ ಪಂಚಾಯಿತಿಗಳಿಗೆ ಅನಿರ್ಬಂಧಿತ ಅನುದಾನ

| ಕ್ರಮ ಸಂಖ್ಯೆ | ಜಿಲ್ಲೆ | ಜನಸಂಖ್ಯೆ | ಭೌಗೋಳಿಕ ವಿಸ್ತೀರ್ಣ (ಹೆಕ್ಟೇರುಗಳಲ್ಲಿ) | ಜನಸಂಖ್ಯೆ ಸೂಚ್ಯಾಂಕ (80%) | ಭೌಗೋಳಿಕ ವಿಸ್ತೀರ್ಣ ಸೂಚ್ಯಾಂಕ (20%) | ಒಟ್ಟು ಸೂಚ್ಯಾಂಕ (100%) | ರಾಜ್ಯ ಸಚಿವ ಸಂಪುಟದ ಅನುಮೋದನೆಯಂತೆ ಗ್ರಾಅಪ ಇಲಾಖೆ ಹಂಚಿಕೆ ಮಾಡಿದ 2019-20 ನೇ ಸಾಲಿನ ಒಟ್ಟು ಅನುದಾನ |
|---|---|---|---|---|---|---|---|
| 1 | 2 | 3 | 4 | 5 | 6 | 7=(5+6) | 8 |
| 1 | ಬಾಗಲಕೋಟೆ | 1272730 | 639436.74 | 0.0270 | 0.0070 | 0.0341 | 57890002 |
| 2 | ಬಳ್ಳಾರಿ | 1710253 | 916583.27 | 0.0309 | 0.0085 | 0.0394 | 64274629 |
| 3 | ಬೆಳಗಾವಿ | 3402038 | 1246845.98 | 0.0723 | 0.0137 | 0.0860 | 80000000 |
| 4 | ಬೆಂಗಳೂರು | 954501 | 142696.34 | 0.0203 | 0.0016 | 0.0218 | 51572797 |
| 5 | ಬೆಂಗಳೂರು (ಗ್ರಾ) | 750469 | 222666.41 | 0.0159 | 0.0024 | 0.0184 | 49781549 |
| 6 | ಬೀದರ್ | 1287585 | 532395.66 | 0.0273 | 0.0058 | 0.0332 | 57446563 |
| 7 | ಚಾಮರಾಜನಗರ | 845669 | 482833.00 | 0.0180 | 0.0053 | 0.0233 | 52303883 |
| 8 | ಚಿಕ್ಕಬಳ್ಳಾಪುರ | 989736 | 420362.60 | 0.0210 | 0.0046 | 0.0256 | 53534646 |
| 9 | ಚಿಕ್ಕಮಗಳೂರು | 898453 | 706025.13 | 0.0191 | 0.0078 | 0.0268 | 54149957 |
| 10 | ಚಿತ್ರದುರ್ಗ | 1332135 | 812187.74 | 0.0283 | 0.0089 | 0.0372 | 59522943 |
| 11 | ದಕ್ಷಿಣ ಕನ್ನಡ | 1345160 | 454568.29 | 0.0286 | 0.0050 | 0.0336 | 57638729 |
| 12 | ದಾವಣಗೆರೆ | 1044074 | 426536.57 | 0.0276 | 0.0062 | 0.0338 | 54167442 |
| 13 | ಧಾರವಾಡ | 798709 | 371615.41 | 0.0170 | 0.0041 | 0.0210 | 51156715 |
| 14 | ಗದಗ | 684804 | 415602.51 | 0.0145 | 0.0046 | 0.0191 | 50152985 |
| 15 | ಹಾಸನ | 1451930 | 680540.92 | 0.0308 | 0.0075 | 0.0383 | 60094488 |
| 16 | ಹಾವೇರಿ | 1237598 | 466211.29 | 0.0263 | 0.0051 | 0.0314 | 56521408 |
| 17 | ಕಲಬುರಗಿ | 1753648 | 1056973.71 | 0.0372 | 0.0116 | 0.0489 | 65547971 |
| 18 | ಕೊಡಗು | 481891 | 407369.01 | 0.0102 | 0.0045 | 0.0147 | 47873982 |
| 19 | ಕೋಲಾರ | 1082701 | 386566.40 | 0.0230 | 0.0042 | 0.0272 | 54365784 |
| 20 | ಕೊಪ್ಪಳ | 1072516 | 522936.96 | 0.0228 | 0.0057 | 0.0285 | 55026881 |
| 21 | ಮಂಡ್ಯ | 1512874 | 488474.90 | 0.0321 | 0.0054 | 0.0375 | 59676047 |
| 22 | ಮೈಸೂರು | 1844426 | 614888.21 | 0.0392 | 0.0068 | 0.0459 | 64040272 |
| 23 | ರಾಯಚೂರು | 1388506 | 797877.30 | 0.0295 | 0.0088 | 0.0383 | 60061970 |
| 24 | ರಾಮನಗರ | 796901 | 349810.42 | 0.0169 | 0.0038 | 0.0208 | 51013202 |
| 25 | ಶಿವಮೊಗ್ಗ | 1127478 | 810850.55 | 0.0239 | 0.0089 | 0.0329 | 57263852 |
| 26 | ತುಮಕೂರು | 2100133 | 1056658.30 | 0.0446 | 0.0116 | 0.0562 | 69357997 |
| 27 | ಉಡುಪಿ | 958801 | 341536.54 | 0.0204 | 0.0038 | 0.0241 | 52747418 |
| 28 | ಉತ್ತರ ಕನ್ನಡ | 1051701 | 990270.27 | 0.0223 | 0.0109 | 0.0332 | 57447412 |
| 29 | ವಿಜಯಪುರ | 1562516 | 953040.28 | 0.0332 | 0.0105 | 0.0437 | 62856009 |
| 30 | ಯಾದಗಿರಿ | 923738 | 495833.04 | 0.0196 | 0.0054 | 0.0251 | 53236453 |
| | ಒಟ್ಟು ಮೊತ್ತ | **37663674** | **18210193.75** | **0.8000** | **0.2000** | **1.0000** | **1720723989** |

17/7/19

ನಿರ್ದೇಶಕರು (ಪಂ.ರಾಜ್-2)
ಗ್ರಾ.ಅ. & ಪಂ.ರಾಜ್ ಇಲಾಖೆ

17.07.19